7. ಶಾಸನ ರಚನೆ.

ವಿಧೇಯಕದ ಪರ್ಯಾಲೋಚನೆ

ಕೈಗಾರಿಕಾ ವಿವಾದಗಳ (ಕರ್ನಾಟಕದ ತಿದ್ದುಪಡಿ) ವಿಧೇಯಕ 2005

ಪರ್ಯಾಲೋಚನಾ ಪ್ರಸ್ತಾವ

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, "2005ರ ಕೈಗಾರಿಕಾ ವಿವಾದಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು" ಪರ್ಯಾಲೋಚಿಸಬೇಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

(ಅನುಬಂಧ VI)

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಕಾರ್ಮಿಕ ನ್ಯಾಯಾಲಯ ಮತ್ತು ಕೈಗಾರಿಕಾ ನ್ಯಾಯಾಧೀಕರಣ ತೀರ್ಪು ನೀಡಿದಂಥ ಸಂದರ್ಭದಲ್ಲಿ ಅದು ಇದುವರೆಗೂ ಸರ್ಕಾರಕ್ಕೆ ಸಲ್ಲಿಸಿ ಅದಕ್ಕೆ ನಾವು ಅಟೆಸ್ಟ್ ಮಾಡಿ ಮುದ್ರೆ ಮಾಡಿದಮೇಲೆ, ಮುದ್ರಿಸಿದಮೇಲೆ ಅಸ್ತಿತ್ವಕ್ಕೆ ಬರತಕ್ಕದ್ದು ಆಗುತ್ತಿದೆ. ಇದರಿಂದ ವಿನಾಕಾರಣ ವಿಳಂಬವಾಗತಕ್ಕದ್ದನ್ನ ತಡೆಗಟ್ಟಲು ಕಾರ್ಮಿಕ ನ್ಯಾಯಾಲಯ, ಕೈಗಾರಿಕಾ ನ್ಯಾಯಾಧೀಕರಣ ನೀಡಿದಂಥ ತೀರ್ಪು ತಕ್ಷಣ ಲಭ್ಯವಾಗಲು ಒಂದು ಹೊಸ ಅಧ್ಯಾಯವನ್ನು ಮಾಡಲು ಈ ತಿದುಪಡಿಯನ್ನು ತಂದಿದ್ದೇವೆ. ಕಾರ್ಮಿಕರಿಗೂ ಮಾಲೀಕರಿಗೂ ಇಬ್ಬರಿಗೂ ಆಗತಕ್ಕ ವಿಳಂಬವನ್ನು ತಡೆಗಟ್ಟಲು ಇದರಿಂದ ತಕ್ಷಣ ನ್ಯಾಯ ಲಭ್ಯ ಅವರಿಗೆ ಸಿಗಬೇಕು. ಎರಡನೆಯದು, ಒಂದು ವೇಳೆ ತೀರ್ಪಿನ ವಿರುದ್ಧ ನ್ಯಾಯಾಲಯಕ್ಕೆ ಮತ್ತೆ ಅಪೀಲು ಹೋದಂತಹ ಸಂದರ್ಭದಲ್ಲಿ ಕಾರ್ಮಿಕರಿಗೆ ಸೆಕ್ಷನ್ 17 (ಬಿ) ಪ್ರಕಾರ ಇಂಟರಿಮ್ ರಿಲೀಫ್ ಸಿಗುವುದು ಆಗುತ್ತದೆ. ಈ ರೀತಿ ಅದು ಇರಲಿಲ್ಲ. ಕಾರ್ಮಿಕರಿಗೆ ಅನುಕೂಲ ಮಾಡಿ ಕೊಡುವ ದಿಸೆಯಲ್ಲಿ ಈ ತಿದ್ದುಪಡಿಯನ್ನು ನಾವು ತಂದಿದ್ದೇವೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಇದು ಒಂದು ರೀತಿಯಲ್ಲಿ ಅನುಕೂಲ, ಇನ್ನೊಂದು ರೀತಿಯಲ್ಲಿ ಅಪಾಯ ಕೂಡ ಇದೆ. ಅಪಾಯ ಎನೆಂದರೆ, ಆರ್ಡರ್ ಮಾಡತಕ್ಕಂಥಹ ಅಫೀಸರ್ ಸರಿ ಇಲ್ಲದಿದ್ದರೆ ಕಾರ್ಮಿಕರಿಗೆ ವಿರೋಧವಾಗುತ್ತದೆ. ಪ್ರಿಸೈಡಿಂಗ್ ಆಫೀಸರ್ ಸರಿಯಾಗಿದ್ದರೆ ಅರ್ಬ್‌ಟ್ರೇಟರ್ ಆಗಿರಬಹುದು, ಲೇಬರ್ ಕಮೀಷನರ್ ಆಗಿರಬಹುದು, ಇದು ರೆಗ್ಯುಲರ್ ಕೋರ್ಟ್ ಅಲ್ಲ ಹಾಗಾಗಿ ಒಂದು ವಿಧಾನದಲ್ಲಿ ನಿಧಾನ ಆಗುವ ಹಾಗೆ ಕಾರ್ಮಿಕರಿಗೆ ಅನುಕೂಲ ಆಗಲಿ ಎಂದು ಹೇಳುವ ಉದ್ದೇಶ ಸರಿ ಇದೆ. ಆದರೆ ಇಲ್ಲಿ ಎನು ಇತ್ತು, ಗವರ್ನ್‌ಮೆಂಟ್‌ಗೆ ಬಂದು, ಅದು ಗವರ್ನ್‌ಮೆಂಟ್ ಅಪ್ರೂವಲ್ ಮಾಡಿ ಆರ್ಡರ್ ಆಗಬೇಕಾಗಿತ್ತು. ಗವರ್ನ್‌ಮೆಂಟ್‌ಗೆ ಬರದೆ ಅವನೇ ಫೈನಲ್ ಎಂದು ಹೇಳಿ ತೀರ್ಮಾನ ಮಾಡಿದಾಗ ಈ ವಿಷಯ, is an officer is not fair enough, then the workers will be put into trouble, Therefore, you put a rider that ir can be reviewed by the higher authorities or put an appeal provision.

ಶ್ರೀ ತನ್ವೀರ್ ಸೇಠ್ : ಎರಡನೆಯದು ಏನಾಗುತ್ತದೆ, ಈ ಹಿಂದೆ ಸರ್ಕಾರಕ್ಕೆ ಕಳುಹಿಸಿ ಅಲ್ಲಿಂದ ಕಾರ್ಮಿಕ ಆಯುಕ್ತರಿಗೆ ಕಳುಹಿಸಿ ಮುದ್ರಣ ಮಾಡಿ ಬರುವವರೆಗೆ ಆರೇಳು ತಿಂಗಳುಗಳು ಎನು ವಿಳಂಬ ಆಗುತ್ತಿತ್ತು, ಅದಕ್ಕೆ ಈಗ ಏನು ಮಾಡಿದ್ದೇವೆಂದರೆ, ಆ ತೀರ್ಮ ಪ್ರತಿವಾದಿಗೆ ಕೊಟ್ಟ ಸಂದರ್ಭದಲ್ಲಿ ಮೂವತ್ತು ದಿವಸಗಳಲ್ಲಿ ನನ್ನ ಇಲಾಖೆಗೆ ಬರುತ್ತದೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಆರ್ಬಿಟ್ರೇಟರ್‌ಗೆ ಏಕೆ ಅಧಿಕಾರ ಕೊಟ್ಟಿರಿ?

ಶ್ರೀ ತನ್ವೀರ್ ಸೇಠ್ : ಆರ್ಬಿಟ್ರೇಟರ್ ಆಗಿರಬಹುದು, ಲೇಬರ್ ಕೋರ್ಟ್ ಆಗಿರಬಹುದು, ಟ್ರಿಬ್ಯುನಲ್ ಆಗಿರಬಹುದು.

ಶ್ರೀ ಜೆ. ಸಿ. ಮಾಧುಸ್ವಾಮಿ : ಆರ್ಬಿಟ್ರೇಟರ್ ಮಾಡಿರುವ ಅವಾರ್ಡ್ ಫೈನಲ್ ಎಂದು ಹೇಳುತ್ತಿದ್ದೀರಿ.

It says : Where the award had been given by an Arbitrator or a labour Court or a Tribunal... ಆರ್ಬಿಟ್ರೇಟರ್‌ಗೆ ನೀವು ಇಷ್ಟು ಅಧಿಕಾರ ಕೊಟ್ಟುಕೊಂಡು ಹೋದರೆ ಹೇಗೆ? ಲೇಬರ್ ಕೋರ್ಟಿಗೆ ಕೊಡಿ, ಟ್ರಿಬ್ಯುನಲ್‌ಗೆ ಕೊಡಿ.

ಶ್ರೀ ತನ್ವೀರ್ ಸೇಠ್ : ಅವರು ನೀಡಿದ ತೀರ್ಮ ಕಾರ್ಯಗತ ಆಗಬೇಕಾದರೆ ಸಾಕಷ್ಟು ವಿಳಂಬವಾಗುತ್ತದೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ನೆಗೋಷಿಯೇಟ್ ಮಾಡಿ ವರದಿ ಕೊಡಲಿಕ್ಕೆ ಆರ್ಬಿಟ್ರೇಟರ್ ಅಪಾಯಿಂಟ್ ಮಾಡುವುದು. ನೀವು ಇಲ್ಲಿ ಅವನಿಗೆ ಜ್ಯುಡಿಷಿಯಲ್ ಪವರ್ ಕೊಡುತ್ತಿದ್ದೀರಿ. ನೀವು ಲೇಬರ್ ಕೋರ್ಟಿಗೆ ಕೊಡುವುದಾದರೆ ನಮ್ಮದೇನೂ ತಕರಾರು ಇಲ್ಲ. "ಆರ್ಬಿಟ್ರೇಟರ್" ತೆಗೆಯುವುದು ಒಳ್ಳೆಯದೆಂಬುದು ನಮ್ಮ ಅಭಿಪ್ರಾಯ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : "ಆರ್ಬಿಟ್ರೇಟರ್" ಇರುವುದು ಇವರಿಬ್ಬರ ಮಧ್ಯೆ ಮಧ್ಯಸ್ಥಿಕೆ ಮಾಡಲಿಕ್ಕೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, Arbitator is nor a Court. It cannot be a Court. ನೀವು ಅರ್ಬಿಟ್ರೇಟರ್ ಮಾಡತಕ್ಕಂಥದ್ದು ಫೈನಲ್ ಎಂದರೆ ಗತಿ ಎನು? ನೀವು ಲೇಬರ್ ಕೋರ್ಟಿಗೆ ಕೊಡಿ, ಅಥವಾ ಇದಕ್ಕೆ ಕೊಡಿ. ಆರ್ಬಿಟ್ರೇಟರ್‌ಗೆ ಪವರ್ ಕೊಟ್ಟರೆ ಹೇಗೆ? ಆರ್ಬಿಟ್ರೇಟರ್ ಎನ್ನುವುದು ಎನಿದೆ ಅದನ್ನು ತೆಗೆದು ಲೇಬರ್ ಕೋರ್ಟಿಗೆ ಕೊಡಿ ಅಥವಾ ಟ್ರಿಬ್ಯುನಲ್‌ಗೆ ಕೊಡಿ. If officer is not good, then they will be put into trouble. Arbitration is one man's decision. It cannot be a judgment. It cannot be final.

ಶ್ರೀ ತನ್ವೀರ್ ಸೇಠ್ : ಮಾನ್ಯ ಸದಸ್ಯರು ನಾನು ಹೇಳುವುದನ್ನು ಕೇಳಿ, Appeal power right from the labour Inspector, Assistant Labour Commissioner, Labour Commissioner ಎಂದು ಇದೆ.

ಸೆಟ್ಲ್‌ಮೆಂಟ್ ಮಾಡುವ ಸಂದರ್ಭದಲ್ಲಿ ಉಲ್ಲಂಘನೆ ಆಗಿರುವ ಬಹುಕೇತ ಪ್ರಕರಣಗಳು ಮಾನ್ಯ ಸದಸ್ಯರಿಗೆ ಗೊತ್ತಿವೆ. ಆರ್ಬಿಟ್ರೇಟರ್‌ಗೆ ಈ ಪವರ್ ಏಕೆ ಕೊಡುತ್ತಿದ್ದೇವೆಂದರೆ, ಒಂದು ಒಪ್ಪಂದಕ್ಕೆ ಬಂದ ಮೇಲೆ ಮತ್ತೆ ಅದು ಸರ್ಕಾರಕ್ಕೆ ಕಳುಹಿಸಿ

ಅದನ್ನು ಮುದ್ರಣ ಮಾಡಿ ಹೋಗುವವರೆಗೆ ಅದು ವಿಳಂಬ ಆದಾಗ ಬೇರೆ ರೀತಿಯಲ್ಲಿ ಸಿದ್ದವಾಗಿ ಹೋಗುತ್ತದೆ. ಆ ಕಾರಣಕ್ಕಾಗಿ ವಿಳಂಬ ಆಗದ ರೀತಿಯಲ್ಲಿ ಮಾಡುತ್ತಿದ್ದೇವೆ. ಜೊತೆಗೆ ನಾವು ಇದರಲ್ಲಿ ಎನು ಮಾಡಿದ್ದೇವೆ ಎಂದರೆ, ಈ ಮೂವತ್ತು ದಿವಸಗಳೊಳಗೆ ಕಾರ್ಯಗತವಾಗಬೇಕೆಂಬ ಷರತ್ತು ಸಹ ಮೇಲಧಿಕಾರಿಗಳಿಗೆ ತಿಳಿಸಿದ್ದೇವೆ. ಕಾರ್ಮಿಕರಿಗೆ ಅನುಕೂಲವಾಗಲಿ ಎಂದು ನೇರವಾಗಿ ಅಫೀಲ್‌ಗೆ ಹೋಗುವ ಪವರ್ಸ್ ಇರುವುದರಿಂದ ಇದರಲ್ಲಿ ಒಂದು ಬಾರಿ ಒಪ್ಪಂದಕ್ಕೆ ಬಂದ ಮೇಲೆ, ಒಪ್ಪಂದಕ್ಕೆ ನೀಡಿರುವ ತೀರ್ಮ ಆದೇಶ ಉಲ್ಲಂಘನೆ ಆಗ ಕೂಡದು ಎನ್ನುವ ಕಾರಣಕ್ಕಾಗಿ ಇದನ್ನು ಮಾಡಿದ್ದೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅವರು ಸರ್ಕಾರಕ್ಕೆ ವರದಿಯನ್ನು ಕೊಡಬೇಕಾಗುತ್ತದೆ. Labour court or the Industrial Tribunal can pronounce. But, the government appoints the arbitrator.

SRI TANVEER SAIT : That will be referred back to the conciliation officer.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅವನು ಓಪನ್ ಕೋರ್ಟಿನಲ್ಲಿ ಪ್ರನೌನ್ಸ್ ಮಾಡಬೇಕಾಗುತ್ತದೆ.

SRI J. C. MADHU SWAMY : The arbitrator is appointed to negotiate. He is not there to decide a matter. ಒಂದು ಜಡ್ಜ್‌ಮೆಂಟ್ ಕೊಡುವುದು ಎಕ್ಸ್‌ಟರ್ನಲ್ ಅಥಾರಿಟಿಗೆ. ಅಥಾರಿಟಿ ಕಡೆಗೆ ಕಳುಹಿಸಿದರೆ ಹೇಗೆ ವಿತ್‌ಡ್ರಾ ಮಾಡಬೇಕು? ಅವನು ಅವಾರ್ಡ್ ಪಾಸ್ ಮಾಡುತ್ತಾನೆ. In the case of cooperative societies, the arbitration award is passed by the Assistant Registrar. After the award is passed, it is called judgment, ನೀವು ಅವಾರ್ಡ್ ಪಾಸ್ ಮಾಡುವ ಸ್ಥಿತಿ ನಿರ್ಮಾಣ ಮಾಡಬೇಕು. ನೀವು ಲೇಬರ್ ಕೋರ್ಟಿಗೆ ಕೊಡಿ, ಟ್ರಿಬ್ಯೂನಲ್‌ಗೆ ಕೊಡಿ ನಾವು ಬೇಡವೆಂದು ಹೇಳುವುದಿಲ್ಲ ಫೀ ಬೇಸಿನ್ ಮೇಲೆ ಮತ್ತು ಕಮೀಷನ್ ಮೇಲೆ ಆರ್ಬಿಟ್ರೇಟರ್ ನೇಮಕ ಮಾಡುತ್ತಾರೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಮಂತ್ರಿಗಳು ಆರ್ಬಿಟ್ರೇಟರ್ ಎನ್ನುವ ಪದವನ್ನು ದಯಮಾಡಿ ಡಿಲೀಟ್ ಮಾಡಿ. It cannot be a judicial authority. ಆರ್ಬಿಟ್ರೇಟರ್‌ಗೆ ಫೈನಲ್ ಅಥಾರಿಟಿ ಕೊಟ್ಟರೆ ಹೇಗೆ? ಕಾರ್ಮಿಕರಿಗೆ ತೊಂದರೆಯಾಗುತ್ತದೆ. ನಾನು ಅದಕ್ಕೇ ಪ್ರಾರಂಭದಲ್ಲಿ ಹೇಳಿದ್ದು. Yes, we agree, but not the arbitrator. If the officer is not good, then ultimately, the workers will be put into trouble.

SRI TANVEER SAIT : ಮಾನ್ಯ ಸಭಾಧ್ಯಕ್ಷರೆ, ಒಂದು ಸಂಧಾನ ಮಾಡಿ, ಒಂದು ತೀರ್ಮಾನಕ್ಕೆ ಬರುತ್ತಾರೆ. ಅದನ್ನು ಅನುಷ್ಟಾನಗೊಳಿಸುವ ಒಳ್ಳೆಯ ಉದ್ದೇಶ ಇಟ್ಟುಕೊಂಡು ಮಾಡುತ್ತಿದ್ದೇವೆ. ಇದರಲ್ಲಿ ಬೇರೆ ಎನೂ ಇಲ್ಲ ಸಚಿಧಾನನ ಮಾಡಿ ಒಪ್ಪಂದಕ್ಕೆ ಬಂದ ವಿಚಾರ ಸಹ ಮುದ್ರಣ ಮಾಡಿ ಅದು ಹೊರಗೆ ಬರಬೇಕಾದರೆ ಎನು ವಿಳಂಬ ಇದೆ, ಈ ವಿಚಾರದಲ್ಲಿ ಓಪನ್ ಕೋರ್ಟಿನಲ್ಲಿ ಜಡ್ಜ್‌ಮೆಂಟ್ ಪ್ರನೌನ್ಸ್

ಮಾಡುವುದಕ್ಕೆ ಇದು ಬರುತ್ತದೆ. ಆರ್ಬಿಟ್ರೇಟರ್ ಮಧ್ಯೆ ಎನು ಒಪ್ಪಂದ ಆಗುತ್ತದೆ ಅದನ್ನು ಅನುಷ್ಟಾನಕ್ಕೆ ತರುವುದಕ್ಕೆ ಇದನ್ನು ಮಾಡಲೇ ಬೇಕು.

SRI TANVEER SAIT : You give the power to the Court or the Tribunal, we have no objection. But, not to the arbitrator. An a Arbitrator cannot become a judicial officer. Sir, he is appointed by the government.

SRI K. JAYAPRAKASH HEGDE : ಲೇಬರ್ ಕೋರ್ಟಿಗೆ ಆರ್ಬಿಟ್ರೇಟರ್ ಅಪಾಯಿಂಟ್ ಮಾಡುತ್ತಾರೆ, ಅವರೆ, ಲೇಬರ್ ಪ್ರನೌನ್ಸ್ ಮಾಡುವುದು.

ಶ್ರೀ ಜಿ. ಎ. ಶ್ರೀರಾಮರೆಡ್ಡಿ : ಮಾನ್ಯ ಸಚಿವರೆ, ಆರ್ಬಿಟ್ರೇಟರ್ ಡಿಸಿಷನ್ ಫೈನಲ್ ಮಾಡುವುದು ಕಾನೂನಿಗೆ ವಿರುದ್ಧವಾದುದಾಗುತ್ತದೆ. ಆದುದರಿಂದ ನಾವು ಹೇಳುವುದನ್ನು ತಾವು ಅರ್ಥ ಮಾಡಿಕೊಳ್ಳಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಲೇಬರ್ ಕೋರ್ಟ್‌ನವರೇ ಡಿಸಿಷನ್ ತೆಗೆದುಕೊಳ್ಳುವುದನ್ನು ನಾವ್ಯಾರೂ ಪ್ರಶ್ನೆ ಮಾಡುತ್ತಿಲ್ಲ. ಆದರೆ ಆರ್ಬಿಟ್ರೇಟರ್‌ಗೆ ತೀರ್ಮಾನ ತೆಗೆದುಕೊಳ್ಳಲು ಮತ್ತು ಅದನ್ನೇ ಫೈನಲ್ ಮಾಡುವುದನ್ನು ಒಪ್ಪುವುದಕ್ಕಾಗುವುದಿಲ್ಲ. ಆದುದರಿಂದ ಆರ್ಬಿಟ್ರೇಟರ್ ಎನ್ನುವ ಪದವನ್ನು ಡಿಲಿಟ್ ಮಾಡಬೇಕು.

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ಸಚಿವರು ಹಾಗೂ ಹಜ್ ರಾಜ್ಯ ಸಚಿವರು) : ಮಾನ್ಯ ಶ್ರೀರಾಮರೆಡ್ಡಿಯವರೆ, ಆರ್ಬಿಟ್ರೇಟರ್ ಎನು ಡಿಸಿಷನ್ ಕೊಡುತ್ತಾರೆ, ಅವರು ಎನು ಒಪ್ಪಂದವನ್ನು ಮಾಡುತ್ತಾರೆ. ಅದನ್ನೇ ಇವ್ಹೊತ್ತಿಗೂ..

(ಗೊಂದಲ)

ಶ್ರೀ ಜಿ. ಎ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾನು ಆಗಿನಿಂದ ಹೇಳುತ್ತಲೇ ಇದ್ದೇನೆ. ಆರ್ಬಿಟ್ರೇಟರ್ ಎನ್ನುವ ಪದವನ್ನು ಡಿಲಿಟ್ ಮಾಡಿ. ಏಕೆಂದರೆ ಇವರ ಪ್ರಕಾರ ಈ ಬಿಲ್‌ನಲ್ಲಿರುವಂತೆ ಆರ್ಬಿಟ್ರೇಟರ್ ತೀರ್ಮಾನವನ್ನೇ ಫೈನಲ್ ಮಾಡಬಹುದು ಎನ್ನುವಚಿತಿದೆ. ಲೇಬರ್ ಕೋರ್ಟ್‌ನವರ ತೀರ್ಮಾನವನ್ನು ಆ ರೀತಿ ತೆಗೆದುಕೊಳ್ಳಲಿ. ಆದರೆ ಆರ್ಬಿಟ್ರೇಟರ್ ತೀರ್ಮಾನವನ್ನು ಫೈನಲ್ ಎಂದು ತೆಗೆದುಕೊಳ್ಳಬಾರದು. ಆದರೆ ಈ ಬಿಲ್‌ನಲ್ಲಿ ಆ ರೀತಿ ಅರ್ಥ ಬರುತ್ತದೆಯಾದ ಕಾರಣ ಮೊದಲು ಆ 'ಆರ್ಬಿಟ್ರೇಟರ್' ಎನ್ನುವ ಪದವನ್ನು ಡಿಲಿಟ್ ಮಾಡಬೇಕು.

ಶ್ರೀ ತನ್ವೀರ್ ಸೇಠ್ : ಮಾನ್ಯ ಶ್ರೀರಾಮರೆಡ್ಡಿಯವರೆ, ನಾನು ಹೇಳುವುದೇನೆಂದರೆ...

(ಗೊಂದಲ)

ಶ್ರೀ ಜೆ. ಸಿ. ಮಾಧುಸ್ವಾಮಿ : ಮಾನ್ಯ ಅಧಕ್ಷರೆ, ನಾವು ಅಷ್ಟು ಹೊತ್ತಿನಿಂದ ಬಿಡಿಸಿ ಬಿಡಿಸಿ ಹೇಳುತ್ತಲೇ ಇದ್ದೇವೆ. ಇವರು ಅರ್ಥ ಮಾಡಿಕೊಳ್ಳುವುದಿಲ್ಲವೆಂದರೆ ಹೇಗೆ ಹೇಳಿ.

ಅಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೆ, ಮಾನ್ಯ ಸಚಿವರಿಗೆ ಸ್ವಲ್ಪ ಟೈಂ ಕೊಡೋಣ. ಅವರು ಇದರ ಬಗ್ಗೆ ಸರಿಯಾಗಿ ಲಾ ಸೆಕ್ರೆಟರಿ ಕನ್ಸಲ್ಟ್ ಮಾಡಿ ಕ್ಲಾರಿಫೈ

ಮಾಡಿಕೊಳ್ಳಲಿ. ಮಾನ್ಯ ಸಚಿವರೆ, ನೀವು ಸ್ವಲ್ಪ ಕಾನೂನು ಕಾರ್ಯದರ್ಶಿಗಳಿಂದ ಈ ಬಗ್ಗೆ ಕ್ಲಾರಿಫೈ ಮಾಡಿಕೊಳ್ಳಿ. ಈಗ ವಿತ್ತಿಯ ಕಾರ್ಯಕಲಾಪ ತೆಗೆದುಕೊಳ್ಳೋಣ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಹಾಗಾದರೆ ಈ ಬಿಲ್ ಬಗ್ಗೆ ಪರ್ಯಾಲೋಚನೆ ಇನ್‌ಕಂಪ್ಲೀಟ್ ಆಗುತ್ತದೆ.

ಅಧ್ಯಕ್ಷರು : ಅದನ್ನು ನಾನು ಪೆಂಡಿಂಗ್‌ನಲ್ಲಿ ಇಟ್ಟಿದ್ದೇನೆ. ಮಾನ್ಯ ಸಚಿವರು ಕ್ಲಾರಿಫೈ ಮಾಡಿಕೊಂಡು ಬರುತ್ತಾರೆ. ಆಮೇಲೆ ಇದನ್ನು ತೆಗೆದುಕೊಳ್ಳೋಣ. ಈಗ ವಿತ್ತೀಯ ಕಾರ್ಯಕಲಾಪ: ತೆಗೆದುಕೊಳ್ಳೋಣ. 2005–2006ನೇ ಸಾಲಿಗೆ ಪೂರಕ ಅಂದಾಜುಗಳು . . . .

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಅದನ್ನು ತೆಗೆದುಕೊಳ್ಳಿ. ನನ್ನದೇನೂ ಅಭ್ಯಂತರವಿಲ್ಲ ಆದರೆ ನಾನು ನಿಯಮ 69ರಲ್ಲಿ ಕಳುಹಿಸಿದ್ದು ಎನಾಯಿತು. ಹೇಳಿ.

ಅಧ್ಯಕ್ಷರು : ದಯಾಮಾಡಿ ನಾನು ಹೇಳುವುದನ್ನು ಕೇಳಿ. ಮೊದಲು ಇದನ್ನು ತೆಗೆದುಕೊಳ್ಳೋಣ. ಆಮೇಲೆ ಅದರ ಬಗ್ಗೆ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಮಾತನ್ನೇ ಕೇಳುತ್ತಿದ್ದೇನೆ. ಅದನ್ನು ಬಿಟ್ಟು ಒಂದಿಂಚೂ ಹೋಗಿಲ್ಲ.

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಕೈಗಾರಿಕಾ ವಿವಾದಗಳ ತಿದ್ದುಪಡಿ ವಿಧೇಯಕದ ಪರ್ಯಾಲೋಚನೆ ಮತ್ತು ಅಂಗೀಕಾರ ಬಹಳ ಜರೂರು ಇದೆ. ಮಾನ್ಯ ಸಚಿವರು ಅದರ ಬಗ್ಗೆ ಕ್ಲಿಯರ್ ಆಗಿ ಹೇಳುತ್ತಾರೆ. ತಾವು ಅವಕಾಶ ಕೊಡಿ.

ಶ್ರೀ ತನ್ವೀರ್ ಸೇಠ್ : ಮಾನ್ಯ ಅಧ್ಯಕ್ಷರೆ, The Arbitrator has been given a special status in terma of labour laws i. e. Industrial Dispute Act.

ಶ್ರೀ ಜೆ. ಸಿ. ಮಾಧುಸ್ವಾಮಿ : ಮಾನ್ಯ ಸಚಿವರೆ, ಸ್ಪೆಶಲ್ ಸ್ಟೇಶನ್ ಕೊಟ್ಟಾದ ಮೇಲೆ ಹಿಂದೆ ಆರ್ಬಿಟ್ರೇಟರ್ ಆಗಲಿ, ಲೇಬರ್ ಕೋರ್ಟ್ ಆಗಲಿ, ಟ್ರಿಬ್ಯುನಲ್ ಆಗಲಿ ತೆಗೆದುಕೊಂಡ ತೀರ್ಮಾನದ ನಂತರ ಆ ಬಗ್ಗೆ ಗೌವರ್ನ್‌ಮೆಂಟ್ ಆರ್ಡರ್ ಆಗುತ್ತಿತ್ತು. ಅಂದರೆ ಆರ್ಬಿಟ್ರೇಟರ್ ಡಿಸಿಷನ್ ಗೌವರ್ನ್‌ಮೆಂಟ್ ಆರ್ಡರ್ ಆಗುತ್ತಿತ್ತು. ಆದರೆ ಈಗ ತಾವು ತಂದಿರುವ ಬಿಲ್ ಪ್ರಕಾರ ಆರ್ಬಿಟ್ರೇಟರ್ ತೀರ್ಮಾನವೇ ಆಟೋಮ್ಯಾಟಿಕಲಿ ಫೈನಲ್ ಎನ್ನುವಂತಿದೆ. ಹಿಂದೆ ಇದ್ದ ಸರ್ಕಾರದ ಆರ್ಡರ್ ಆದಮೇಲೆ ಫೈನಲ್ ಎನ್ನುವಂತೆ ಇದ್ದದ್ದನ್ನು ತಾವು ಈಗ ಸರಾಸರಿ ಇಲ್ಲ ಓಪನ್ ಕೋರ್ಟಿನಲ್ಲಿ ಆದ ತೀರ್ಮಾನವನ್ನೇ ಫೈನಲ್ ಎಂದು ಹೇಳಿದ್ದೀರಿ. ಈಗ ತಂದಿರುವ ಬಿಲ್ ಪ್ರಕಾರ ಆರ್ಬಿಟ್ರೇಟರ್ ಹೇಳಿದ್ದೇ ಫೈನಲ್ ಆಗುತ್ತದೆ.

ಅಧ್ಯಕ್ಷರು : ಮಾನ್ಯ ಮಾಧುಸ್ವಾಮಿರವರೆ, ಮಾನ್ಯ ಸಚಿವರು ಸ್ವಲ್ಪ ಟೈಂ ತೆಗೆದು ಕೊಳ್ಳಲಿ ಬಿಡಿ. ಮತ್ತೆ ನೀವು ಅದನ್ನೇ ಹೇಳುತ್ತಿದ್ದೀರಲ್ಲ.

ಶ್ರೀ ಜೆ. ಸಿ. ಮಾಧುಸ್ವಾಮಿ : ಅವರು ಸ್ವಲ್ಪ ಟೈಂ ತೆಗೆದುಕೊಳ್ಳಲಿ ಎಂದದಕ್ಕೆ ನಾವು ಒಪ್ಪಿಕೊಂಡೇ ಸುಮ್ಮನೆ ಕುಳಿತುಕೊಂಡೆವು. ಆದರೆ ಮಾನ್ಯ ಸಚಿವರೆ ಮತ್ತೆ ಎದ್ದು ನಿಂತು ಹೇಳಿದ್ದಕ್ಕೆ ನಾನು ಮತ್ತೆ ಮಾತನಾಡಲು ನಿಂತುಕೊಂಡದ್ದು.

ಅಧ್ಯಕ್ಷರು : ಮಾನ್ಯ ಸಚಿವರೆ, ನಾನು ಆಗಲೇ ನಿಮಗೆ ಹೇಳಿದೆ. ನೀವು ಕಾನೂನು ಸೆಕ್ರೆಟರಿಯವರನ್ನು ಕನ್ಸಲ್ಟ್ ಮಾಡಿ ವಿಚಾರವನ್ನು ತಿಳಿದುಕೊಂಡು ಬಂದು ಸದನದಲ್ಲಿ ಕ್ಲಾರಿಫೈ ಮಾಡಿ.

ಶ್ರೀ ತನ್ವೀರ್ ಸೇಠ್ : ಮಾನ್ಯ ಅಧ್ಯಕ್ಷರೆ, ನಾನು ಹೇಳುವುದು ಎನೆಂದರೆ ಹಿಂದೆ ಆರ್ಬಿಟ್ರೇಟರ್ ಎನು ಡಿಸಿಷನ್ ಮಾಡುತ್ತಿದ್ದರು ಅದು ಇಲಾಖೆಗೆ ಬಂದು, ಸರ್ಕಾರಕ್ಕೆ ಬಂದು ತದನಂತರ ಅದು ಮುದ್ರಣ ಆದಮೇಲೆ ಪರಿಹಾರ ಎಂಬುದು ಸಿಗುತ್ತಿತ್ತು. ಆದರೆ ಈ ಪ್ರೋಸಸ್ ಆಗಲು ಐದಾರು ತಿಂಗಳುಗಳೇ ಹಿಡಿಯುತ್ತಿತ್ತು. ಆದರೆ ಈಗ ಟೈಂ ಜಾಸ್ತಿ ಆಗುವುದನ್ನು ತಪ್ಪಿಸುವ ಸಲುವಾಗಿ ಆರ್ಬಿಟ್ರೇಟರ್ ಕೊಡುವ ತೀರ್ಪನ್ನು ಅನುಷ್ಠಾನಕ್ಕೆ ತರುವುದಕ್ಕೆ ಅನುಕೂಲವಾಗುವಂತೆ ಮಾಡುತ್ತಿದ್ದೇವೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಸಚಿವರೆ, ನೀವು ಆಗಲೀ ಸೆಕ್ಷನ್ **17 (ಎ)**ನಲ್ಲಿ ಇರುವುದನ್ನು ಹೇಳಿದಿರಿ. **17(ಎ)**ನಲ್ಲಿ ಏನಿದೆಯೆಂದರೆ :

" If the appropriate Government is of the opinion in any case where the Award has been given by a Labour Court or Tribunal in relation to an industrial dispute to which it is a party or if the Central Government is of the opinion in any case where an Award has been given by the National Trubunal, that will be inexpedient on public grounds after effecting the national economy . ."

What provision do you have? It is a simple common sense. I cannot understand how the Law Department recommends that an Arbitrator can become a judicial officer. The Arbitrator is appinted by the Government. It is the duty o the Arbitrator to submit the report consulting both the parties and then the Government has to take a decision. Then, how can an Arbitrator's Award will be final? It can't be final. Otherwise, it goes against the priniciple of natural justice.

SRI TANVEER SAIT : We are not altering the main Act.

SRI K. JAYAPRAKS HEGDE : Under "commencement of the Award" under Section 17(A), you have said, "an Award including an Arbitrator's Award shall become enforceable on the expiry of 30 days from the date of its publication under Section 17. ಈಗ ನೀವು ಎನು ಮಾಡುತ್ತಿದ್ದೇರೆಂದರೆ ಇದನ್ನೇ ತೆಗೆದುಕೊಂಡು ಆರ್ಬಿಟ್ರೇಟರೇ ಡೈರೆಕ್ಟಾಗಿ ಪ್ರೊನೌನ್ಸ್ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದೀರಿ; ಅದು ಗೌವರ್ನ್‌ಮೆಂಟ್‌ಗೆ ಬರಬೇಕಾಗಿಲ್ಲ ಎನ್ನುವಂತಿದೆ.

SRI TANVEER SAIT : Section 17(A) of the Industrial Disputes Act says an Award passed, including by an Arbitrator or by a Labour Court or a Tribunal, shall become enforceable on the expiry of 30 days. This is the Act. But today the practice is, it has to come to the Government and then to the Labour Commissioner and then it has to be publicized which takes 5 to 6 months time. Now what we have done, every such award pronounced becomes enforceable on the expiry of 30 days from the dare of pronouncement.

SRI G. V. SRIRAMA REDDY : That is okay for Truibunal and Labour Court, but not for the Arbitratot Award. Please try to understand that an Arbitrator cannot pronounce an order. It is a question of law. You are giving power to the Arbitrator. An Arbitrator can only submit a report.

SRI TANVEER SAIR : It is an Award.

SRI J. C. MADHU SWAMY : An Arbitrator cannot be treated as a Judiciary, or QuasiJudiciary or SemiJudiciary. He is an individual appointed for a particular purpose. ಆರ್ಬಿಟ್ರೇಟರ್ ಇರಬಹುದು, ಲೇಬರ್ ಕೋಟ್ ಇರಬಹುದು, ಟ್ರಿಬ್ಯೂನಲ್ ತೀರ್ಮಾನ ಇರಬಹುದು, ಇವುಗಳು ಸರ್ಕಾರಕ್ಕೆ ಬಂದು ಸರ್ಕಾರ ನೋಟಿಫಿಕೇಶನ್ ಹೊರಡಿಸಿದ ಮೇಲೆ ಅದು ಇಂಪ್ಲಿಮೆಂಟ್ ಆಗಬೇಕು. ಆದರೆ ತಾವು ಈಗ ಆ ಕ್ಲಾಸನ್ನೇ ತೆಗೆದು ಹಾಕುತ್ತಿದ್ದೀರಿ. ಲೇಬರ್ ಕೋರ್ಟ್, ಟ್ರಿಬ್ಯೂನಲ್ ತೀರ್ಮಾನದ ಬಗ್ಗೆ ನಾನು ಪ್ರಶ್ನೆ ಮಾಡುತ್ತಿಲ್ಲ. ಆದರೆ ಆರ್ಬಿಟ್ರೇಟರ್ ತೀರ್ಮಾನವನ್ನು ಫೈನಲ್ ಎಂದು ಟ್ರೀಟ್ ಮಾಡಬೇಡಿ ಎಂದೇ ನಾನು ಆಗಿನಿಂದ ಹೇಳುತ್ತಿದ್ದೇನೆ. ಆದರೆ ತಾವು ಅವರಿಗೇ ಜ್ಯುಡಿಷಿಯಲ್ ಪವರ್ ಕೊಡುತ್ತೇವೆಂದು ವಾದ ಮಾಡುತ್ತಾ ನಿಂತುಕೊಂಡರೆ ಹೇಗೆ ಹೇಳಿ? The decision taken by an Arbitrator has to come before the Government or a court.

ಶ್ರೀ ತನ್ವೀರ್ ಸೇಠ್ : ಈ ಒಂದು ಕಾಯಿದೆ ಬಗ್ಗೆ ಹೇಳುವವರೆಗೂ ನೀವು ಕೇಳುವುದಿಲ್ಲ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಅವರು ಹೇಳಿದ್ದನ್ನೇ ಹೇಳುತ್ತಿದ್ದಾರೆ. You are telling the same. Thing. When an Argitrator gives his award, the Government must make an order.

SRI TANVEER SAIR : No. It is very clear . . . .

(Interruptions)

MR. SPEAKER : Why are you prolonging like this?

ಶ್ರೀ ಜೆ. ವಿ. ಶ್ರೀರಾಮರೆಡ್ಡಿ : ಈಗ ನಾನು ಸೆಕ್ಷನ್ 17 (ಎ) ಓದಿ ಹೇಳಿದ್ದೇನೆ.

ಶ್ರೀ ತನ್ವೀರ್ ಸೇಠ್ : ನೀವೇನು ಹೇಳುತ್ತಿದ್ದೀರಿ, ಆವಾರ್ಡ್ ಎಂದು ಅಲ್ಲ. That is a decision ಎಂದು ಹೇಳುತ್ತಿದ್ದೀರಿ. It is not a decision That is an Award.

ಆರ್ಬಿಟ್ರೇಟರ್ ನೀಡುವಂತಹ ಆವಾರ್ಡ್ ಎನಿದೆ.

ಶ್ರೀ ಜೆ. ವಿ. ಶ್ರೀರಾಮರೆಡ್ಡಿ : ಆವಾರ್ಡ್ ಕೊಡುವುದಕ್ಕೆ ಅವನಿಗೆ ಪವರ್ ಇಲ್ಲ. The Arbitrator has no authority to give an Awatd.

SRI TANVEER SAIT : Award is given by an Arbitrator or Labour Court or a Tribunal in relation to the Industrial Dispute Act.

ಶ್ರೀ ಜೆ. ವಿ. ಶ್ರೀರಾಮರೆಡ್ಡಿ : ನೋಡಿ ನಾವು ಇದನ್ನು ಖಚಿಡಿತಾ ಒಪ್ಪುವುದಕ್ಕೆ ಆಗುವುದಿಲ್ಲ. ನೀವು ಆರ್ಬಿಟ್ರೇಟರ್ ಡಿಲಿಟ್ ಮಾಡಿ ಟ್ರಿಬ್ಯೂನಲ್ ಪವರ್ ಕೊಡಿ, ನಾವೇನೂ ಅದಕ್ಕೆ ಅಬ್ಜೆಕ್ಷನ್ ಮಾಡುತ್ತಿಲ್ಲ. ಏಕೆ ನೀವು ಸುಮ್ಮಸುಮ್ಮನೆ ವಾದ ಮಾಡುತ್ತೀರಿ ?

ಶ್ರೀ ಕೆ. ಆರ್. ರಮೇಶ್ ಕುಮಾರ್ : ಸನ್ಮಾನ್ಯ ಅಧ್ಯಕ್ಷರೆ, ಆರ್ಬಿಟ್ರೇಟರ್ ಸರ್ವಿಸನ್ನೆ ಇರಿಗೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ . . . . .

ಅಧ್ಯಕ್ಷರು : ಅವರು ಇದರ ಬಗ್ಗೆ ನಂತರ ಮಾಡಲಿ ಈಗ ಬೇರೆ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಚರ್ಚೆ ಮಾಡಬೇಕಾದಂತಹ ವಿಷಯಗಳು ಬಹಳ ಇವೆ, ಆದ್ದರಿಂದ ಇದನ್ನು ಐದು ನಿಮಿಷದಲ್ಲಿ ಮುಗಿಸಿಬಿಡಿರಿ.

ಅಧ್ಯಕ್ಷರು : ಇಲ್ಲಿ ಎನೆಂದರೆ ಅವರು ಹೇಳಿದ್ದೇ ಹೇಳುತ್ತಾರೆ, ನೀವು ಹೇಳಿದ್ದೆ ಹೇಳುತ್ತಿದ್ದೀರಿ.

ಶ್ರೀ ಕೆ. ಆರ್. ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಫ್ಯಾಕ್ಟರೀಸ್ ಡಿಪಾರ್ಟ್‌ಮೆಂಟ್ಸ್‌ನಲ್ಲಿ ಆರ್ಬಿಟ್ರೇಟರ್ ಅನ್ನು ಅಪಾಯಿಂಟ್‌ಮೆಂಟ್ ಮಾಡುತ್ತಾರೆ. Whenever there is a dispute, an Arbitrator is introduced. He is an Arbiter his role is only to arbitrate, not to be arbitratary.

ನಾನು ಅದಕ್ಕೆ ಡಿಕ್ಷನರಿ ತರಿಸಿಕೊಂಡು ನೋಡಿದೆ. ಮಧ್ಯಸ್ಥಿಕೆ ಮನುಷ್ಯ ಅವನು. ಇಲ್ಲಿ ನೋಡಿದರೆ, "Arbiter" ಎಂದರೆ ಪಂಚಾಯತ್, ನಿರ್ಣಾಯಕ, ಮಧ್ಯಸ್ಥ. He is at best a "mediator". He tries to bring two parties who are at loggerheads together, gives a finding, tries to negoiate, tries to coordinate and arbitrates. He cannot acqire the status of a Judge or can he usurp judicial powers. When he discharges his functions, he should be very very diligent.

ಶ್ರೀ ತನ್ವೀರ್ ಸೇಠ್ : ಮಾನ್ಯ ಅಧ್ಯಕ್ಷರೆ, ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್ ಪ್ರಕಾರ : "Award" means an interim or a final determination of any

industrial dispute or any question relating there to by any Labour Court, Industrial Tribunal or National Industrial Tribunal and includes an Arbitrator Award made under Section 10A. ಇದರಲ್ಲಿ ಏನಾಗುತ್ತದೆ ಎಂದು ಹೇಳುವುದಾದರೆ, ನಮ್ಮಲ್ಲಿ Arbitrator or a Labour Court or a Tribunal has the same status in regard to industrial disputes. The Act is clear. Without altering the Act we are only making a provision to see that delay is not there.

ಶ್ರೀ ಜಿ. ಸಿ. ಮಾಧುಸ್ವಾಮಿ : ಈಗ ಒರಿಜಿನಲ್ ಕಾಯಿದೆಯಲ್ಲಿ ಎಲ್ಲಾ ಅಥಾರಿಟಿಗಳು ಮಾಡಿದ್ದನ್ನು ಗೌವರ್ನ್‌ಮೆಂಟ್ ನೋಟಿಫಿಕೇಶನ್ ಮಾಡಿದಮೇಲೆ ಆರ್ಡರ್ ಆಗುತ್ತದೆ. ಎಂದು ಈಗ ಇದೆ ಅಪರೇಟ್ ಆಗುವುದು ಅದು, only after the notification. But here ನೋಟಿಫಿಕೇಶನ್ ಬೇಕಿಲ್ಲ ಅವರು ಹೇಳುವುದೆ ಫೈನಲ್ ಆಗಲಿ ಎಂದು ಇಲ್ಲಿ ಇವರು ಬಿಲ್ ತಂದುರುವುದು. ಅದಕ್ಕೆ ನಾವು ಕೇಳುತ್ತಿರುವುದು, ಆರ್ಬಿಟ್ರೇಟರ್ ಹೇಳುವುದು ಫೈನಲ್ ಮಾಡಬೇಡಿ, ನೋಟಿಫಿಕೇಷನ್ ಇದೆ ಗೌವರ್ನ್‌ಮೆಂಟ್ ಮುಂದೆ ಬರುವುದು, ನಿಮ್ಮ ಡಿಪಾರ್ಟ್‌ಮೆಂಟ್ ನೋಡುವುದು ಸ್ಕೂಟನೈಸ್ ಆಗಿರುವುದು ಎಂದು ನಾವು ಹೇಳುತ್ತಿದ್ದೇವೆ ನಾನು ಅಪಾಯಿಂಟ್ ಮಾಡಿದ್ದರೆ, ನಾನು ನೋಡುತ್ತಿದೆ, ಆರ್ಬಿಟ್ರೇಷನ್ ಏನಾಗಿದೆ ಎಂದು ಆರ್ಡರ್ ಇಶ್ಯೂ ಮಾಡುತ್ತಿದ್ದೆ. ಆದರೆ ಈಗ ನಾವು ಅಪಾಯಿಂಟ್ ಮಾಡಿದವನು, ಅವನೇ ಇವತ್ತು ಆರ್ಡರ್ ಇಶ್ಯೂ ಮಾಡಲು, ಅದೇ ಜಡ್ಜ್‌ಮೆಂಟ್ ಎಂದು ಬಿಲ್ ತಂದು ಇಂಡಸ್ಟ್ರೀಯಲ್ ಡಿಸ್‌ಪ್ಯೂಟ್ ಆಕ್ಟ್‌ನಲ್ಲಿ ಆ ಒಂದು ರೆಕಮೆಂಡೇಷನ್ ನಮಗೆ ಬಂದು ನೋಟಿಫಿಕೇಷನ್ ಆದಮೇಲೆ ಇಂಪ್ಲಿಮೆಂಟ್ ಆಗುತ್ತಿತ್ತು. ಈಗ ತಾವು ಆ ಪ್ರಾವಿಜನ್ ತೆಗೆಯುತ್ತಿದ್ದೀರಿ ಎಂದು ನಾವು ಇಷ್ಟು ತಕರಾರು ಮಾಡುತ್ತಿರುವುದು. It was there, but the entire decision was inplemneted only after the notification of the government. ಅದನ್ನು ತೆಗೆದಿರಲ್ಲಾ ನೀವು ಜಿ. ಓ. ಆಗುವ ಹಾಗೆ ಇಲ್ಲ, ಗೌವರ್ನ್‌ಮೆಂಟ್ ನೋಟಿಫಿಕೇಶನ್ ಅಗತ್ಯ ಇಲ್ಲ. ಅಲ್ಲೇ ಫೈನಲ್ ಆಗಿಬಿಡಲಿ, ಓಪನ್ ಕೋರ್ಟ್‌ನಲ್ಲಿ ಆಗಲಿ ಎಂದು ಆ ಅಧಿಕಾರವನ್ನು ಆರ್ಬಿಟ್ರೇಟಗೆ ಕೊಡಬೇಡಿ ಎಂದು ಹೇಳುತ್ತಿರುವುದು.

ಶ್ರೀ ತನ್ವೀರ್ ಸೇಠ್ : ಮಾನ್ಯ ಸದಸ್ಯರುಗಳು ನೀವು ಹೇಳುವಂಥಾದ್ದನ್ನು ನಾನು ಕೇಳುತ್ತಿದ್ದೇನೆ. ನಾನು ಹೇಳುವುದನ್ನು ನೀವು ಕೇಳಬೇಕು. ಆದರೆ ನೀವು ಹೇಳಿದ್ದನ್ನೆ ನಾನು ಮಾಡಬೇಕೆಂದು ಅಲ್ಲ. ಲೀಗಲ್ ಆಕ್ಟ್ ಅನ್ನು ನಿಮ್ಮ ಹತ್ತಿರ ಕಳುಹಿಸಿಕೊಟ್ಟಿದ್ದೇನೆ. ಇದರಲ್ಲಿ ಎನಾಗುತ್ತದೆ ಅಂದರೆ under the I. D. Act the Awards need not be certified by the government or courts. ಏನಾಕಾರಣ ಆಗುತ್ತಿರುವಂತಹ ಏಳಂಬವನ್ನು ತಡೆಗಟ್ಟಲು ಇದನ್ನು ತಂದಿದ್ದೇನೆ 4 ತಿಂಗಳು, 5 ತಿಂಗಳು 8 ತಿಂಗಳು ತಡವಾಗುತ್ತಿರುವುದು ನಿಮಗೇ ಗೊತ್ತಿದೆ. ತೀರ್ಮಾನವಾಗಿರುವಂಥಾದ್ದು ಅನುಷ್ಠಾನಕ್ಕೆ ತರುತ್ತಿಲ್ಲವೆಂದು ಒತ್ತಡ ತರುತ್ತಿರುವವರು ನೀವೆ, ಈಗ ಇದರಲ್ಲಿ ಏನಾಗುತ್ತದೆ ಎಂದರೆ ಅಂಡರ್ ಸೆಕ್ಷನ್ 17(ಎ) ಇದನ್ನು ಮಾಡಿದಮೇಲೆ They will have powers to go in for appeal under Section 17(B) where the workers will get interim relief.

ಈಗ ಈ ರೀತಿ ಮಾಡಬೇಕೆಂದು ಏನು ಒಂದು ಸದುದ್ದೇಶವನ್ನು ಇಟ್ಟುಕೊಂಡು ತೆಗೆದುಕೊಂಡು ಬಂದಿದ್ದೇವೆ, ಅಟ್‌ಲೀಸ್ಟ್ ನೀವು ಬಿಲ್ ಅನ್ನು ಸರಿಯಾಗಿ ನೋಡಿಕೊಂಡು ನಮಗೆ ಹೇಳಿದರೆ ನಾವು ಎನಾದರೂ ಮಾಡಬಹುದು.

ಶ್ರೀ ಜೆ. ಸಿ. ಮಾಧುಸ್ವಾಮಿ : ಬಿಲ್ ಓದುವುದಿಲ್ಲವೆಂದು ಹೇಳುತ್ತೀರಿ, ಆರ್ಬಿಟ್ರೇಷನ್‌ಗೆ ಜ್ಯುಡಿಷಿಯರಿ ಪವರ್ ಕೊಡುತ್ತೇವೆಂದು ಬಿಲ್ ಇಟ್ಟು, ನೀವು ಆಫೀಸರ್ ಹೇಳಿದ್ದನ್ನು ಓದಿಕೊಂಡು ನಮಗೆ ಹೇಳುತ್ತಾ ಇದ್ದೀರಿ. ಮಾನ್ಯ ಅಧ್ಯಕ್ಷರೆ, ಕಾಯಿದೆ ಓದಿ ಮಾತನಾಡುತ್ತಿದ್ದೇವೆ ಇದು ಪಾಸ್ ಮಾಡುವುದಕ್ಕಾಗುವುದಿಲ್ಲ ಯಾವುನೋ ಒಬ್ಬ ಎಜೆಂಟ್‌ಗೆ ಜ್ಯುಡಿಷಿಯರಿ ಪವರ್ ಕೊಡಬೇಕೆಂದು ಹೇಳುವಂತಹ ಯಾರರೋ ಮಾತು ಕಟ್ಟಿಕೊಂಡು ಇಲ್ಲಿ ಬಿಲ್ ಇಂಟ್ರಡ್ಯೂಸ್ ಮಾಡಿ ನಮಗೆ ಓದಿಕೊಂಡು ಬನ್ನಿ ಎಂದು ಮಾತನಾಡುತ್ತಾರೆ. What is that you are talking to us?

ಶ್ರೀ ಜೆ. ವಿ. ಶ್ರೀರಾಮರೆಡ್ಡಿ : ಆರ್ಬಿಟ್ರೇಟರ್ ಎಂದರೆ ಎನು ಅಂತನಾದರೂ .

ಶ್ರೀ ಜೆ. ಸಿ. ಮಾಧುಸ್ವಾಮಿ : ಏನು ಆರ್ಬಿಟ್ರೇಟರ್ ಎಂದರೆ ಜಡ್ಜಾ ಅವನು? ಒಬ್ಬ ದಳ್ಳಾಳಿಗೆ, ಮಧ್ಯಸ್ಥನಿಗೆ ಜಡ್ಜ್‌ಮೆಂಟ್ ಪವರ್ ಕೊಡುತ್ತೇವೆಂದು ಹೇಳುತ್ತೀರಿ, ನೋಡಿ, you take back that word, ಓದಿಕೊಂಡು ಮಾತನಾಡಿ ಎಂದು ಹೇಳುವುದನ್ನು ತಾವು ಹಿಂದಕ್ಕೆ ತೆಗೆದುಕೊಳ್ಳಬೇಕು. ನಾವು ಕಾಡು ಹರಟೆ ಹೊಡೆಯುವುದಕ್ಕೆ ಕುಳಿತಿದ್ದೇವಾ ಇಲ್ಲಿ?

ಶ್ರೀ ಜೆ. ವಿ. ಶ್ರೀರಾಮರೆಡ್ಡಿ : ಓದಿಕೊಂಡು ಬನ್ನಿ ಎಂದರೆ ಏನು ಅರ್ಥ ಅದು. ?

ಶ್ರೀ ಜೆ. ಸಿ. ಮಾಧುಸ್ವಾಮಿ : ನೀವು ಓದಿಕೊಂಡು ಬಿಲ್ ಇಂಟ್ರಡ್ಯೂಸ್ ಮಾಡುವುದು ಕಲಿತುಕೊಳ್ಳಿ.

ಅಧ್ಯಕ್ಷರು : ಅವರೂ ಓದಿಕೊಂಡು ಬಂದಿದ್ದಾರೆ . . . .

ಶ್ರೀ ಜೆ. ಸಿ. ಮಾಧುಸ್ವಾಮಿ : ಬೆಳಿಗ್ಗೆಯಿಂದ ಇಲ್ಲಿ ಕುಳಿತುಕೊಂಡು ಕಡ್ಲೆಮರಿ ತಿನ್ನುತ್ತಿದ್ದೇವಾ?

ಶ್ರೀ ಜೆ. ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಇದು ಹೇಗೆ ಹೇಳಿ, ಓದಿಕೊಂಡು ಬನ್ನಿ ಎಂದರೆ; ಅಲ್ಲಿ ಯಾರೋ ಬರೆದು ಕೊಟ್ಟಿರುವುದನ್ನು ಓದುತ್ತಿರುವವರು ಅವರು ಅದನ್ನು ಓದಿರತಕ್ಕಂಥವರು ನಾವು.

(ಗೊಂದಲ)

ಶ್ರೀ ಜೆ. ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, I am sorry. ಅದೇನು ಸಾರ್ ಓದಿಕೊಂಡು ಬನ್ನಿ ಎಂದು ಹೇಳಿದರೆ.

ಅಧ್ಯಕ್ಷರು : ಇರಲಿ, ಓದಿಕೊಂಡು ಬಂದಿಲ್ಲ ಎಂದು ಆ ರೀತಿ ಎಲ್ಲಾ ಮಾತನಾಡಬಾರದು. ಏನೆಂದರೆ ಇಂಡಸ್ಟ್ರೀಯಲ್ ಡಿಸ್‌ಪ್ಯೂಟ್ ಆಕ್ಟ್ ಪ್ರಕಾರ...

ಶ್ರೀ ಜೆ. ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಇಷ್ಟೇ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್ ಪ್ರಕಾರ It is an authority under government. ಅವರು ತೆಗೆದುಕೊಂಡು ಡಿಸಿಷನ್ ಅನ್ನು ನೋಟಿಫೈ ಮಾಡಿದಮೇಲೆ, ಅದು ಆರ್ಡರ್ ಆಗುತ್ತದೆ. ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕಾಗುತ್ತದೆ. ಇವರು ಈಗ ಕೇಳುತ್ತಿರುವುದು

ಗೌವರ್ನ್‌ಮೆಂಟ್ ನೋಟಿಫಿಕೇಷನ್ ಬೇಡ. ಜಿ. ಓ. ಬೇಡ ಅಲ್ಲೇ ಡಿಸಿಷನ್ ತೆಗೆದುಕೊಂಡು ಓಪನ್ ಕೋರ್ಟಿನಲ್ಲಿ ಪ್ರನೌನ್ಸ್ ಮಾಡಿಬಿಟ್ಟರೆ That will be a final decision ಈ ಬಿಲ್‌ನಲ್ಲಿ ಎಂದು ಕೇಳುತ್ತಿದ್ದಾರೆ. ನಾನು ಹೇಳುತ್ತಿರುವುದು, ಲೇಬರ್ ಕೋರ್ಟಿಗೆ ಇಟ್ಟುಕೊಳ್ಳಿ ಟ್ರಿಬ್ಯೂನಲ್‌ಗೆ ಇಟ್ಟುಕೊಳ್ಳಿ ಜಿ. ಓ. ಬೇಡ, ನೋಟಿಫಿಕೇಶನ್ ಬೇಡ. ಅಲ್ಲಿ ತೀರ್ಮಾನವಾಗಿದ್ದೇ ಫೈನಲ್ ಆಗಲಿ, ನಮ್ಮದು ತಕರಾರು ಇಲ್ಲ. ಆದರೆ ಆರ್ಬಿಟ್ರೇಟರ್ ಏನು ತೀರ್ಮಾನ ತೆಗೆದುಕೊಳ್ಳುತ್ತಾರೆ ಅದು ನೋಟಿಫಿಕೇಶನ್ ಆಗಬೇಕು. ಅವನು ಏನು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಅಧಿಕಾರ ಇಲ್ಲ. ಅವನು ನೆಗೋಷಿಯೆಟ್ ಮಾಡುವುದಕ್ಕೇ ಇರುವುದು. ಆರ್ಬಿಟ್ರೇಟರ್ ಎನ್ನುವ ಕ್ಲಾಸ್ ತೆಗೆದುಬಿಟ್ಟು ಬಿಲ್ ತೆಗೆದುಕೊಂಡು ಬನ್ನಿ ಎಂದರೆ, ಯಾವನೋ ಬೇಕಾದವನು ಒಬ್ಬನನ್ನು ನಿಮ್ಮ ಮಂತ್ರಿಗಳು ಕಳುಹಿಸಿದ ಆರ್ಬಿಟ್ರೇಟರ್ ಯಾವುದೋ ಕಂಪನಿ ಬರುವಾಗ ಬಂದು ಕುಳಿತುಕೊಂಡು ಬಿಟ್ಟರೆ ಅದು ಫೈನಲ್ ಆರ್ಡರ್ ಆಗಬೇಕಾ? ನಾಳೆ ಕೇಳುತ್ತಾರೆ. ಬೇಕಾಗಿರುವನು ಒಬ್ಬರು ಆರ್ಬಿಟ್ರೇಟರ್ ಅನ್ನು ಹಾಕಿದ್ದೇನೆ ಎಂದು ಬಿಟ್ಟು ಅಲ್ಲಿರುವ ಲೇಬರ್ಸ್ ಎಲ್ಲಾ ನಿರ್ನಾಮವಾಗಬೇಕೇ ?

MR. SPEAKER : Let him have his say.

SRI TANVEER SAIT : An Arbitrator is a Judge.

ಶ್ರೀ ಜಿ. ಎ. ಶ್ರೀರಾಮರೆಡ್ಡಿ : ನೀವು ಲಾಯರ್ ಹೇಳಿ ಸಾರ್. Can an Arbitrator become a Judge?

ಶ್ರೀ ತನ್ವೀರ್ ಸೇಠ್ : ಅವನು ಮಧ್ಯಸ್ಥಿಕೆಗಾರ, He is an Umpire. ಏನಾಗುತ್ತದೆ ಅಂದರೆ, ಅಂಡರ್ ಸೆಕ್ಷನ್ 10 ಎ. . .

SRI K. R. RAMESH KUMAR : Honestly speaking, he is an young man. He has putforth all his efforts. Probably, there is a wrong inpression in his mind. We tend to disagree. Let us not make an issue out of it. Let us advice him. Let him seek wise counsel of officers and come back. Please make a second enquiry with your officers and try to come a fresh. Let us not try to precipitate the matter.

ಅಧ್ಯಕ್ಷರು : ಈಗ ಸಪ್ಲಿಮೆಂಟರಿ ಡಿಮ್ಯಾಂಡ್ ತೆಗೆದುಕೊಳ್ಳೋಣ.

ಶ್ರೀ ಜಗದೀಶ್ ಶೆಟ್ಟರ್ : ಬಹಳ ಸ್ಮಾಲ್ ಪಾಯಿಂಟ್, ಮಾನ್ಯ ಮಾಧುಸ್ವಾಮಿಯವರು ಏನು ಹೇಳುತ್ತಿದ್ದಾರೆ, ಅದು ಬಹಳ ಚರ್ಚೆ ಮಾಡುವಂತಾದ್ದು ಇದೆ. ಅವರು ಅದನ್ನು ಅರ್ಥ ಮಾಡಿಕೊಳ್ಳಬೇಕು.

ಅಧ್ಯಕ್ಷರು : ಆಯಿತು, ಅದನ್ನು ಆಮೇಲೆ ತೆಗೆದುಕೊಳ್ಳೋಣ. Let us keep it pending ಈಗ ಸಪ್ಲಿಮೆಂಟರಿ ಡಿಮ್ಯಾಂಡ್ ತೆಗೆದುಕೊಳ್ಳೋಣ. ಮಾನ್ಯ ಜಗದೀಶ್ ಶೆಟ್ಟರ್‌ರವರೇ, ಆಯಿತು ಕುಳಿತುಕೊಳ್ಳಿ.

ಶ್ರೀ ತನ್ವೀರ್ ಸೇಠ್ : ಮಾನ್ಯ ಮಾಧುಸ್ವಾಮಿಯವರೇ, ಇಲ್ಲಿ ಏನಾಗುತ್ತದೆಂದರೆ,

ಶ್ರೀ ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ತಾವು ಸೆಕ್ಷನ್ 10 (ಎ) ಬಗ್ಗೆ ತಾವು ರೆಫರ್ ಮಾಡಿದ್ದೀರಿ. A voluntary reference of disputes to arbitration. Where an industrial dispute exists or is apprehended and employer and the workmen agree to refer the dispute to an arbitration. ಅಲ್ಲವೇ ?

Sri K. R. Rameshkumar : Hon'ble Minister is also a human like any of us. There appears to be a misconception in his mind about the status of arbitrator. I have advised the Hon'ble Minister, he is showing earnestness. He will seek the wise counsel of his officers and come back. Let us not make it precipitate.

ಅಧ್ಯಕ್ಷರು : ಅವರು ತೆಗೆದುಕೊಳ್ಳಿ ಎಂದು ಹೇಳಿದ ಮೇಲೂ, ಇಂಟರ್‌ಫಿಯರ್ ಆಗುತ್ತೀರಿ. ಎನು ಇಲ್ಲ. I cannot understand. ಮಾನ್ಯ ಜಯಪ್ರಕಾಶ್ ಹೆಗ್ಡೆಯವರೇ, ತಾವು ದಯಮಾಡಿ ಕುಳಿತುಕೊಳ್ಳಿ. ಈಗ ಸಪ್ಲಿಮೆಂಟರಿ ಡಿಮ್ಯಾಂಡ್‌ಅನ್ನು ತೆಗೆದುಕೊಳ್ಳೋಣ. Let him continue.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಇಲ್ಲಿ ಇಂಟರ್‌ಪಿಯರ್ ಅಂತ ಅಲ್ಲ ಇವರು ಪಾಸ್ ಮಾಡಬೇಕೆಂದು ನಮ್ಮ ಹತ್ತಿರ ಏಕೆ ತರಬೇಕು? ಬಿಲ್ ಮೇಲೂ ಚರ್ಚೆ ಮಾಡುವುದು ಇಲ್ಲದಿದ್ದರೆ, ನೀವು ಪಾಸ್ ಮಾಡಿಕೊಳ್ಳಿ. ನಾವು ಸುಮ್ಮನೆ ಕುಳಿತುಕೊಳ್ಳುತ್ತೇವೆ.

ಅಧ್ಯಕ್ಷರು : ಅವರು ಮಾತನಾಡಿಕೊಂಡು ಬರಲಿ, ಎಂದು ಹೇಳಿದ ಮೇಲೂ ಸುಮ್ಮನೆ ಮಿನಿಸ್ಟರ್‌ರನ್ನು ಕೇಳುತ್ತಿದ್ದೀರಿ. ಆಯಿತು, ತಾವು ಕುಳಿತುಕೊಳ್ಳಿ, ಈಗ ಸಪ್ಲಿಮೆಂಟರಿ ಡಿಮ್ಯಾಂಡ್ ಅನ್ನು ತೆಗೆದುಕೊಳ್ಳೋಣ. ಮಾನ್ಯ ಮಿನಿಸ್ಟರ್ ರವರೇ, Talk with your Secretary. ಪಾಯಿಂಟ್ಸ್ ಅನ್ನು ನೋಟ್ ಮಾಡಿಕೊಂಡು ಬನ್ನಿ ಈಗ ಮಾನ್ಯ ಅರ್ಥ ಮಂತ್ರಿಯವರು ಸಪ್ಲಿಮೆಂಟರಿ ಡಿಮಾಂಡ್ ಅನ್ನು ಮಂಡನೆ ಮಾಡಿದ್ದಾರೆ. ತಾವು ಮಾತನಾಡಿ about the supplementary demands.

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಈಗ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ವರದಿಯನ್ನು ಒಪ್ಪಿಸಬೇಕು.

ಅಧ್ಯಕ್ಷರು : ಆಯಿತು, place ಮಾಡಿ.

8. ವರದಿಗಳನ್ನೊಪ್ಪಿಸುವುದು.

ಶ್ರೀ ಕೆ. ಎಸ್. ಈಶ್ವರಪ್ಪ (ಅಧ್ಯಕ್ಷರು, ಸಾರ್ವಜನಿಕ ಲೆಕ್ಕ ಪತ್ರ ಸಮಿತಿ) : ಮಾನ್ಯ ಅಧ್ಯಕ್ಷರೆ, 2004–05ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಅಧ್ಯಕ್ಷನಾದ ನಾನು, ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ, 1997–98 ರಿಂದ 2001–2002 ರವರೆಗಿನ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ವರದಿಯಲ್ಲಿನ